# ಆರ್‌ಬಿಐ ಸ್ವಚ್ಛ ನೋಟುಗಳ ನೀತಿಯನ್ನು ಅನುಸರಿಸುತ್ತದೆ: ಕೊಳೆಯಾದ ನೋಟುಗಳನ್ನು ಶೀಘ್ರವಾಗಿ ಬೇರ್ಪಡಿಸಲು ಹೊಸ ಯಂತ್ರಗಳನ್ನು ಸ್ಥಾಪಿಸುತ್ತದೆ

**ಮೇ 4, 2002**

ಭಾರತದ ರಿಸರ್ವ್ ಬ್ಯಾಂಕ್‌ನ ಡೆಪ್ಯುಟಿ ಗವರ್ನರ್ ಶ್ರೀ ವೇಪಾ ಕಾಮೇಸಮ್ ಅವರು ಭಾರತದ ರಿಸರ್ವ್ ಬ್ಯಾಂಕ್‌ನ ಹೊಸದೆಹಲಿಯ ಕಚೇರಿಯಲ್ಲಿ ಹೊಸ ಕರೆನ್ಸಿ ಪರಿಶೀಲನಾ ಮತ್ತು ಸಂಸ್ಕರಣಾ ವ್ಯವಸ್ಥೆ (ಸಿವಿಪಿಎಸ್) ಗಳನ್ನು ಉದ್ಘಾಟಿಸುವಾಗ "ಭಾರತದ ರಿಸರ್ವ್ ಬ್ಯಾಂಕ್, ಈ ದೇಶದ ಜನತೆಗಾಗಿ 'ಸ್ವಚ್ಛ ನೋಟುಗಳ ನೀತಿ' ಗೆ ಬದ್ಧವಾಗಿದೆ ಮತ್ತು ರಾಷ್ಟ್ರಕ್ಕಾಗಿ ಈ ಗುರಿಯನ್ನು ಸಾಧಿಸಲು ತಂತ್ರಜ್ಞಾನವನ್ನು ಒಳಗೊಂಡಂತೆ ಅದರ ಎಲ್ಲ ಸಂಪನ್ಮೂಲಗಳನ್ನು ಬಳಸುತ್ತದೆ" ಎಂದು ಹೇಳಿದ್ದಾರೆ. ಈ ಉದ್ಘಾಟನಾ ಸಮಾರಂಭದಲ್ಲಿ ಪಂಜಾಬ್ ನ್ಯಾಷನಲ್ ಬ್ಯಾಂಕಿನ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಎಸ್.ಎಸ್. ಕೊಹ್ಲಿ, ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್‌ನ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಬಿ.ಡಿ. ನಾರಂಗ್, ಕರೆನ್ಸಿ ಮತ್ತು ನಾಣ್ಯ ತಯಾರಿಕೆಯ ಜಂಟಿ ಕಾರ್ಯದರ್ಶಿ ಶ್ರೀ ನವೀನ್ ಕುಮಾರ್ ಮತ್ತು ಆಯ್ದ ವಾಣಿಜ್ಯ ಬ್ಯಾಂಕುಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು. ಕೊಳೆಯಾದ ಮತ್ತು ಹರಿದ ಕರೆನ್ಸಿ ನೋಟುಗಳ ವೇಗ ಸಂಸ್ಕರಣೆಗಾಗಿ ರಿಸರ್ವ್ ಬ್ಯಾಂಕಿನಲ್ಲಿ ಯಂತ್ರವನ್ನು ಸ್ಥಾಪಿಸಲಾಗಿದೆ. ಯಂತ್ರಗಳನ್ನು ಸ್ಥಾಪಿಸಲಾಗಿರುವ ಹತ್ತು ರಿಸರ್ವ್ ಬ್ಯಾಂಕ್ ಕಚೇರಿಗಳ ಪೈಕಿ ನವದೆಹಲಿಯೂ ಒಂದು.

ಸಿವಿಪಿಎಸ್ ಯಂತ್ರವು ಒಂದು ಗಂಟೆಗೆ 50,000–60,000 ಕೊಳೆ ನೋಟುಗಳನ್ನು ಸಂಸ್ಕರಿಸುವ ಸಾಮರ್ಥ್ಯ ಹೊಂದಿದೆ. ಇದರೊಂದಿಗೆ ಕೊಳೆ ನೋಟುಗಳನ್ನು ನಾಶಪಡಿಸಲು ಚೂರುಚೂರು ಮಾಡಿ, ಪುಡಿ ಮಾಡಿ ಉಂಡೆ ಮಾಡುವ ವ್ಯವಸ್ಥೆಯಿರುವ ಯಂತ್ರ ಮಾರುಕಟ್ಟೆಯಿಂದ ಕೊಳೆಯಾದ ಮತ್ತು ಹರಿದ ನೋಟುಗಳನ್ನು ವೇಗವಾಗಿ ಹಿಂತೆಗೆದುಕೊಳ್ಳಲು ಸಹಾಯ ಮಾಡುತ್ತದೆ. ಅಲ್ಲದೆ ನೋಟುಗಳನ್ನು ಚಿಕ್ಕ ಪುಡಿಮಾಡಿ ಒತ್ತಡದಲ್ಲಿ ಗಟ್ಟಿಗಳನ್ನಾಗಿ ಮಾಡುವ ವ್ಯವಸ್ಥೆಯಿಂದಾಗಿ ಸುಡುವುದರಿಂದ ಉಂಟಾಗುತ್ತಿದ್ದ ಮಾಲಿನ್ಯವೂ ಉಂಟಾಗುವುದಿಲ್ಲವಾದ್ದರಿಂದ ಇದು ಪರಿಸರಸ್ನೇಹಿಯೂ ಆಗಿದೆ. ಇದು, ಕೊಳೆ ನೋಟುಗಳನ್ನು ಚೂರು ಚೂರುಗಳನ್ನಾಗಿ ಮಾಡಿ ಪುಡಿ ಮಾಡಿ ಗಟ್ಟಿಗಳನ್ನಾಗಿ ಮಾಡುವ ಮೂಲಕ ನಾಶಪಡಿಸುತ್ತದೆ. ಈ ಗಟ್ಟಿಗಳನ್ನು ಕಚೇರಿ ಮತ್ತು ಮನೆಯ ಬಳಕೆಯ ವಸ್ತುಗಳನ್ನು ಮಾಡಲು ಬಳಸಬಹುದು. ಅವನ್ನು ಕೈಗಾರಿಕೆಗಳಲ್ಲಿ ಇಂಧನವನ್ನಾಗಿ ಸಹ ಬಳಸಬಹುದು.

ಭಾರತದ ರಿಸರ್ವ್ ಬ್ಯಾಂಕಿನ ಗವರ್ನರ್ ಡಾ. ಬಿಮಲ್ ಜಲನ್ ಅವರು 1999ರ ಜನವರಿಯಲ್ಲಿ 'ಸ್ವಚ್ಛ ನೋಟು ನೀತಿ'ಯನ್ನು ಘೋಷಿಸಿದರು ಎಂಬುದನ್ನು ಗಮನಿಸಬೇಕು. 'ಸ್ವಚ್ಛ ನೋಟು ನೀತಿ'ಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕಾದರೆ ಹೊಸ ನೋಟುಗಳನ್ನು ಚಲಾವಣೆಗೆ ತರುವಷ್ಟೆ ಕೊಳೆಯಾದ ನೋಟುಗಳನ್ನು ಚಲಾವಣೆಯಿಂದ ಹಿಂತೆಗೆದುಕೊಳ್ಳುವುದೂ ಮುಖ್ಯವಾಗುತ್ತದೆ. ಈ ಎರಡೂ ಗುರಿಗಳನ್ನು ಸಾಧಿಸುವುದಕ್ಕಾಗಿ, ಭಾರತದ ರಿಸರ್ವ್ ಬ್ಯಾಂಕು, ಕಳೆದ ಒಂದು ವರ್ಷದಲ್ಲಿ ಕರೆನ್ಸಿ ನಿರ್ವಹಣೆಗೆ ಸಂಬಂಧಿಸಿದಂತೆ ವ್ಯವಸ್ಥೆಗಳಲ್ಲಿ ಮತ್ತು ಕಾರ್ಯವಿಧಾನಗಳಲ್ಲಿ ಅನೇಕ ಬದಲಾವಣೆಗಳನ್ನು ಮಾಡಿದೆ. ನೋಟು ಸತ್ಯಾಪನೆಯ ಮತ್ತು ಸಂಸ್ಕರಣೆ ಹಾಗು ಕೊಳೆ ಮತ್ತು ಹರಿದ ನೋಟುಗಳನ್ನು ಚೂರು ಮಾಡಿ ಪುಡಿಯ ಗಟ್ಟಿಗಳನ್ನಾಗಿ ಮಾಡಿ ನಾಶಗೊಳಿಸುವುದನ್ನು ಯಾಂತ್ರೀಕೃತಗೊಳಿಸುವ ಕ್ರಮಗಳೂ ಇದರಲ್ಲಿ ಸೇರಿವೆ.

ಮೊದಲನೆಯ ಹಂತದಲ್ಲಿ ರಿಸರ್ವ್ ಬ್ಯಾಂಕ್ ಒಂಬತ್ತು ನೀಡಿಕೆ ಕಚೇರಿಗಳಲ್ಲಿ ಸ್ಥಾಪಿಸುವುದಕ್ಕಾಗಿ 22 ಕರೆನ್ಸಿ ಸತ್ಯಾಪನ ಮತ್ತು ಸಂಸ್ಕರಣ ಯಂತ್ರಗಳನ್ನು ಖರೀದಿ ಮಾಡಿದೆ. ಈ ಯಂತ್ರಗಳನ್ನು ಬೆಂಗಳೂರು, ಬೇಲಾಪುರ, ಚಂದೀಘರ್, ಹೈದರಾಬಾದ್, ಜೈಪುರ್, ಜಮ್ಮು, ಕಾನ್‌ಪುರ್, ನವದೆಹಲಿ ಮತ್ತು ಪಾಟ್ನಾಗಳಲ್ಲಿ ಸ್ಥಾಪಿಸಲಾಗುತ್ತಿದೆ. ಯಾಂತ್ರೀಕರಣದ ಎರಡನೇ ಹಂತದಲ್ಲಿ ಆದಷ್ಟು ಶೀಘ್ರವಾಗಿ ಉಳಿದ ನೀಡಿಕೆ ಕಚೇರಿಗಳಲ್ಲಿಯೂ ಸಿವಿಪಿಎಸ್‌ಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಈ ಯಂತ್ರಗಳನ್ನು ಸ್ಥಾಪಿಸಿದರೆ, ಭಾರತದ ರಿಸರ್ವ್ ಬ್ಯಾಂಕಿನ ನೋಟು ವಿಲೇವಾರಿ ಸಾಮರ್ಥ್ಯ ಗಣನೀಯವಾಗಿ ಹೆಚ್ಚುತ್ತದೆ. ಈ ಹೆಚ್ಚಿದ ಸಾಮರ್ಥ್ಯ, ಕೊಳೆಯಾದ ನೋಟುಗಳನ್ನು ಚಲಾವಣೆಯಿಂದ ಹಿಂತೆಗೆದುಕೊಳ್ಳಲು ಸಹಾಯಕವಾಗುತ್ತದೆ. ರಿಸರ್ವ್ ಬ್ಯಾಂಕಿನ ಎರಡು ಕರೆನ್ಸಿ ಮುದ್ರಿಸುವ ಮುದ್ರಣಾಲಯಗಳ ಹೆಚ್ಚುವರಿ ಸಾಮರ್ಥ್ಯದ ಸಹಾಯದಿಂದ ಹೊಸ ನೋಟುಗಳನ್ನು ಅದೇ ಕಾಲದಲ್ಲಿ ಚಲಾವಣೆಗೆ ಬಿಡುವುದರಿಂದ ಹೊಸ ನೋಟುಗಳಿಗಿರುವ ಸಾರ್ವಜನಿಕರ ಬೇಡಿಕೆಯನ್ನು ಸಾಕಷ್ಟು ಪೂರೈಸಬಹುದೆಂಬ ನಿರೀಕ್ಷೆಯಿದೆ.

ಸ್ವಚ್ಛ ನೋಟು ನೀತಿಯನ್ನು ಅನುಷ್ಠಾನಗೊಳಿಸಲು ರಿಸರ್ವ್ ಬ್ಯಾಂಕು ಕೈಗೊಂಡಿರುವ ಇತರ ಕ್ರಮಗಳೆಂದರೆ: ಬ್ಯಾಂಕಿನ ನೋಟುಗಳಿಗೆ ಪಿನ್ ಹಾಕುವುದನ್ನು ನಿಷೇಧಿಸುವಂತೆ, ಪಿನ್ನನ್ನು ಹಾಕದೆ ಕೊಳೆಯಾದ ನೋಟುಗಳನ್ನು ರಿಸರ್ವ್ ಬ್ಯಾಂಕಿಗೆ ಸಲ್ಲಿಸುವಂತೆ, ಪಿನ್ನುಗಳಿಗೆ ಬದಲಾಗಿ ಕಾಗದ ಪಟ್ಟಿಗಳನ್ನು ಬಳಸುವಂತೆ ಮತ್ತು ಸ್ವಚ್ಛ ನೋಟುಗಳನ್ನು ಸಾರ್ವಜನಿಕರಿಗೆ ನೀಡುವಂತೆ ಎಲ್ಲ ಬ್ಯಾಂಕುಗಳಿಗೆ ಸಾರ್ವಜನಿಕ ಹಿತಾಸಕ್ತಿಯ

ದೃಷ್ಟಿಯಿಂದ ನಿರ್ದೇಶನವನ್ನು ನೀಡಿರುವುದು ಅಲ್ಲದೆ ಮಾರುಕಟ್ಟೆ ಪ್ರದೇಶಗಳಿಗೆ ಹೋಗಿ ಸಾರ್ವಜನಿಕರಿಂದ ಕೊಳೆಯಾದ ಮತ್ತು ಹರಿದ ನೋಟುಗಳನ್ನು ಸಂಗ್ರಹಿಸುವ ಏರ್ಪಾಡನ್ನೂ ಇದು ಆಗಾಗ ಮಾಡುತ್ತದೆ. ಪಟ್ಟಣಗಳ ಅನೇಕ ಪ್ರದೇಶಗಳಿಗೆ ನಾಣ್ಯಗಳನ್ನು ಒದಗಿಸುವುದಕ್ಕಾಗಿ ನಿಯತಕಾಲಿಕವಾಗಿಸಂಚಾರಿ ವ್ಯಾನ್‌ಗಳನ್ನು ಸಹ ಕಳುಹಿಸಲಾಗುತ್ತದೆ. ಇದರ ಪರಿಣಾಮವಾಗಿ, ಚಲಾವಣೆಯಲ್ಲಿರುವ ಕೊಳೆ ನೋಟುಗಳ ಸಂಬಂಧದಲ್ಲಿನ ಸಾರ್ವಜನಿಕರ ದೂರುಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ ಮತ್ತು ಹೊಸ ನೋಟುಗಳ ಲಭ್ಯತೆ ಗಣನೀಯವಾಗಿ ಹೆಚ್ಚಿದೆ.

ಅಲ್ಪನಾಕಿಲ್ಲಾವಾಲಾ
ಪ್ರಧಾನವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ: 2001–2002/1220